quickmarketreports.com

Date : 03-11-2015

# ಇರಾನ್ ಡಿಸೆಂಬರ್‌ನಿಂದ ಬಾಸ್ಮತಿ ಅಕ್ಕಿ ಆಮದಿಗೆ ಹೊಸ ಲೈಸನ್ಸ್ ನೀಡುವ ನಿರೀಕ್ಷೆ

ರಫ್ತುದಾರರು ಇರಾನ್ ಭಾರತದಿಂದ ಬಾಸ್ಮತಿ ಅಕ್ಕಿ ಆಮದು ಮಾಡಲು ಡಿಸೆಂಬರ್ ಅಥವಾ ಜನವರಿಯಲ್ಲಿ ಹೊಸ ಲೈಸನ್ಸ್ ನೀಡಬಹುದೆಂದು ಅಲ್ಲಿನ ಆಮದುದಾರರು ಸೂಚಿಸಿದ್ದಾರೆಂದು ಆಲ್ ಇಂಡಿಯಾ ರೈಸ್ ಎಕ್ಸ್‌ಪೋರ್ಟರ್ಸ್ ಎಸೋಸಿಯೇಶನ್ ಕಾರ್ಯಕಾರಿ ಡೈರೆಕ್ಟರ್ ಸುಂದರೇಶನ್ ಹೇಳಿದ್ದಾರೆನ್ನಲಾಗಿದೆ. ಹಿಂದಿನ ವರ್ಷದ ಅಕ್ಟೋಬರ್ ತಿಂಗಳಿಂದ ಅಧಿಕ ಪ್ರಮಾಣದ ಕೀಟನಾಶಕ ಹೊಂದಿರುವ ಹಾಗೂ ಉತ್ಪಾದನೆಯಲ್ಲಿ ಸ್ವಾವಲಂಬನೆ ಹೊಂದಿರುವ ಕಾರಣಗಳನ್ನು ನೀಡಿ ಆಮದು ಮಾಡಲು ಹೊಸ ಲೈಸೆನ್ಸ್ ನೀಡಿಕೆಯನ್ನು ನಿಲ್ಲಿಸಿತ್ತು. ಇದರಿಂದ 2014–15ರಲ್ಲಿ ಭಾರತದಿಂದ ರಫ್ತಾಗುವ ಪ್ರಮುಖ ಕಷ್ಯುತ್ವನ್ನವಾಧ ಬಾಸ್ಮತಿ ರಫ್ತಿಗೆ ಪ್ರಬಲ ಹೊಡೆತ ಬಿದ್ದಿದೆಯೆನ್ನಲಾಗಿದೆ. 2014–15ರಲ್ಲಿ ಇರಾನ್‌ಗೆ 0.93 ಮಿಲಿಯನ್ ಟನ್ ಬಾಸ್ಮತಿ ರಫ್ತಾಗಿತ್ತು, 2013–14ರಲ್ಲಿ 1.4 ಮಿಲಿಯನ್ ಟನ್ ಬಾಸ್ಮತಿ ರಫ್ತಾಗಿತ್ತೆಂದು ಎಪಿಇಡಿಎ ಮೂಲಗಳು ಹೇಳಿವೆಯೆನ್ನಲಾಗಿದೆ. ಎಐಆರ್‌ಇಎ ಮೂಲಗಳ ಪ್ರಕಾರ 2014–15ರಲ್ಲಿ ರೂ.192 ಕೋಟಿ ಮೌಲ್ಯದ ಬಾಸ್ಮತಿ ಇರಾನ್‌ಗೆ ರಫ್ತಾಗಿದ್ದರೆ 2013–14ರಲ್ಲಿ ಇದು ರೂ.335 ಕೋಟಿ ಮೌಲ್ಯದ್ದಾಗಿತ್ತೆನ್ನಲಾಗಿದೆ.